೧. ಶಿಕ್ಷಣ ಮತ್ತು ಬದುಕು

ತೃಪ್ತವಾಗದ ಆಕಾಂಕ್ಷೆಗಳು

ಶಿಕ್ಷಣವನ್ನು ಕುರಿತಾದ ಮೂಲಭೂತ ಪ್ರಶ್ನೆಗಳು ನಮ್ಮ ಇಂದಿನ ಬದುಕಿನೊಂದಿಗೆ ನೇರವಾಗಿ ಸಂಬಂಧ ಪಡೆದಿವೆ. ಇದೊಂದು ಅನಿವಾರ್ಯ. ಆದರೆ ಇಂದಿನ ಶಿಕ್ಷಣ ನಮ್ಮ ದಿನನಿತ್ಯದ ಬದುಕಿನ ವಾಸ್ತವತೆಗಳನ್ನು ಎದುರಿಸಲು ನಮ್ಮ ಮಕ್ಕಳನ್ನು ತಯಾರು ಮಾಡುತ್ತಿದೆಯೇ ಎಂಬುದು ಈ ಹೊತ್ತಿನ ಅತ್ಯಂತ ಪ್ರಮುಖ ಪ್ರಶ್ನೆ. ಇಂತಹ ಒಂದು ಪ್ರಶ್ನೆಯನ್ನು ಕೇಳಬೇಕಾದ ಅಸಹಜ ಸ್ಥಿತಿಯಲ್ಲಿ ನಾವಿರುವುದೇ ಒಂದು ದುರಂತ. ಏಕೆಂದರೆ, ಜಾಗತೀಕರಣ ಮತ್ತು ಎಣೆಯಿಲ್ಲದ ತಾಂತ್ರಿಕ ಪ್ರಗತಿ ಮನುಷ್ಯನ ದುರಾಸೆಗಳಿಗೆ ಕೊನೆಯೇ ಇಲ್ಲದಂತೆ ಮಾಡಿದೆ. ಹಾಗಾಗಿ ಬದುಕಿನ ಯಾವ ಪರಿಮಿತಿಗಳಿಗೂ ಒಳಪಡದೆ ಯಾರು ಬೇಕಾದರೂ ಮಣ್ಣಿನ ಕಣವಾಗಿ ಹುಟ್ಟಿ ಚಿನ್ನದ ಬೆಟ್ಟವಾಗಿ ಬೆಳೆಯಬಹುದು. ಈ ಸಾಧ್ಯತೆಯನ್ನು ನಮ್ಮ ಇಂದಿನ ತಾಂತ್ರಿಕ ಜಗತ್ತು ನಮ್ಮೆದುರಿಗೆ ತೆರೆದಿಟ್ಟಿದೆ. ಹೀಗೆ ಈ ಅಪರಿಮಿತ ಸಾಧ್ಯತೆಗಳ ನಡುವೆ ಎಲ್ಲ ಕ್ಷೇತ್ರಗಳಲ್ಲೂ ಮನುಷ್ಯ ಬದುಕಿನ ವಾಸ್ತವತೆಗಳನ್ನು ಮರೆತು ಕನಸುಗಳ ಬೆನ್ನಟ್ಟಿ ಓಡುತ್ತಿದ್ದಾನೆ.

ಹೆಚ್ಚು, ಮತ್ತೂ ಹೆಚ್ಚು ಎಂದು ಬೆಳೆಯಬಹುದಾದ ಸಾಧ್ಯತೆಗಳು ಕಣ್ಣೆದುರಿಗೇ ಇರಬೇಕಾದರೆ ಮಹತ್ವಾಕಾಂಕ್ಷೆಯ ಮನಸ್ಸುಗಳು ತೃಪ್ತವಾಗುವುದು ಸಾಧ್ಯವೇ? ಮಹತ್ತರವಾದುದನ್ನು ಸಾಧಿಸಿದರೂ ಈ ಮನಸ್ಸುಗಳು ಅತೃಪ್ತಿಯ ದಾವಾನಲವಾಗಿಯೇ ಉಳಿಯುತ್ತವೆ. ಏಕೆಂದರೆ ಬೆಳೆಯುವ, ಗಳಿಸುವ ಸಾಧ್ಯತೆಗೆ ಕೊನೆಯೆಂಬುದೇ ಇಲ್ಲ. "World is not enough" ಎಂಬ ಜೇಮ್ಸ್‌ಬಾಂಡ್ ಸಿನಿಮಾ ಬಂದಿರುವುದು ತಾಂತ್ರಿಕ ಸಾಧ್ಯತೆ ಹುಟ್ಟಿಸುವ ದುರಾಸೆಯನ್ನು ಪಾಶ್ಚಾತ್ಯ ಜಗತ್ತೂ ಗುರುತಿಸುತ್ತಿರುವ ಹಿನ್ನಲೆಯಲ್ಲಿ. ಈ ಅತೃಪ್ತಿಯ ವಿಷಮ ಪರಿಣಾಮಗಳನ್ನು ವ್ಯಕ್ತಿಯೊಬ್ಬನೇ ಅನುಭವಿಸುವುದಿಲ್ಲ. ಇದು ಇಡೀ ಸಮಾಜಕ್ಕೆ ಹರಡುತ್ತದೆ. ಪರಿಸರ ನಾಶವಾಗುತ್ತದೆ, ಬದುಕಿನ ಸಂಬಂಧಗಳ ಮಾಧುರ್ಯವನ್ನು ನಾವು ಕಳೆದುಕೊಳ್ಳುತ್ತಿದ್ದೇವೆ. ವೈಯಕ್ತಿಕ ಬದುಕು – ಸಾಧನೆಗಳ ಭರದಲ್ಲಿ ತನ್ನ ಸಮಷ್ಟಿ ಜವಾಬ್ದಾರಿಯನ್ನು ಮರೆತ ಮನುಷ್ಯ ದುರಾಸೆಗಳ, ಅತೃಪ್ತಿಯ ಮೂಟೆಯಾಗಿ ಬದಲಾಗುತ್ತಾನೆ. ಇಂತಹ ದುರ್ದೆಸೆಗೆ

ಬಂದು ನಿಂತಾಗ ನಮ್ಮ ಶಿಕ್ಷಣ ನಮಗೆ ಏನನ್ನು ಕೊಟ್ಟಿತು, ಏನನ್ನು ಕಲಿಸಿತು ಎಂದು ಆಲೋಚಿಸಲು ಪ್ರಾರಂಭಿಸುತ್ತೇವೆ.

ಶಿಕ್ಷಣದಿಂದ ಪಡೆಯುತ್ತಿರುವುದೇನು ?

ಇಂದಿನ ಶಿಕ್ಷಣ ನಾವೇ ಸೃಷ್ಟಿಸಿಕೊಂಡ ಬದುಕಿನ ಕೃತಕ ಆವಶ್ಯಕತೆಗಳನ್ನು ಪೂರೈಸಿಕೊಳ್ಳಲು ಮಾತ್ರ ನಮ್ಮ ಮಕ್ಕಳನ್ನು ಸಿದ್ಧಗೊಳಿಸುತ್ತಿರುವಂತೆ ಕಾಣುತ್ತದೆ. ಬದುಕಿನ ಮೂಲಭೂತ ಆವಶ್ಯಕತೆಗಳನ್ನು ಪೂರೈಸಿಕೊಳ್ಳಲಾರದೆ ನಲುನಲುಗಿ ನೊಂದರೂ ನಮ್ಮ ಬಹುಸಂಖ್ಯಾತ ಪೋಷಕರು ತಮ್ಮ ಮಕ್ಕಳನ್ನು ಈ ವಾಸ್ತವ ಲೋಕದ ಭಾಗವಾಗಿ ನೋಡುವುದೇ ಇಲ್ಲ. ಅದಮ್ಯ ಸಾಧ್ಯತೆಯ ಈ ಮಕ್ಕಳು ನಮ್ಮ ಕನಸಿನ ಲೋಕದ ಕೂಸುಗಳು. ಈ ಮಕ್ಕಳ ಅಪರಿಮಿತಿ ಸಾಧ್ಯತೆಗಳನ್ನು ನಾವು ಆರೋಗ್ಯಕರವಾದ ಆಯಾಮದಲ್ಲಿ ನೋಡಿದ್ದರೆ ಚೆನ್ನಾಗಿತ್ತು. ಆದರೆ ವಾಸ್ತವದಲ್ಲಿ ಈ ಮಕ್ಕಳ ಸಾಧ್ಯತೆ ಆಯಾ ಮಕ್ಕಳ ಸುಪ್ತ ಸಾಮರ್ಥ್ಯದ ಸುತ್ತ ಹೆಣೆದ ಕನಸಾಗಿಲ್ಲ. ಬದಲಿಗೆ ಈ ತಂದೆತಾಯಿಗಳ ಅತೃಪ್ತಿ, ವಿಫಲತೆಗಳು ಸೃಷ್ಟಿಸಿದ ಕನಸುಗಳಾಗಿವೆ. ತಾವು ಪಡೆಯಲಾರದ್ದನ್ನು, ಸಾಧಿಸಲಾರದ್ದನ್ನು ಮಕ್ಕಳು ಸಾಧಿಸಬೇಕೆಂಬುದು ಇವರ ಕನಸು. ಈ ಕನಸಿನ ಚೌಕಟ್ಟನ್ನು ಮಕ್ಕಳು ಮೀರದಂತೆ ನೋಡಿಕೊಳ್ಳುವುದೇ ತಂದೆ ತಾಯಿಗಳು ಬಯಸುವ ಶಿಕ್ಷಣ. ಬೇಡಿಕೆಗೆ ತಕ್ಕಂತೆ ಪೂರೈಕೆ ಮಾಡುವುದೇ ನಮ್ಮ ಶಿಕ್ಷಣದ ಮಾರುಕಟ್ಟೆಯ ಕೆಲಸ.

ಹಾಗಾದರೆ ಈ ತಂದೆತಾಯಿಗಳಿಗೆ ಬದುಕಿನ ವಾಸ್ತವತೆಗಳ, ಪರಿಮಿತಿಗಳ ಅರಿವು ಇಲ್ಲವೇ? ಉದಾಹರಣೆಗೆ ಕೃಷಿಪ್ರಧಾನವಾದ ಈ ದೇಶದಲ್ಲಿ ರಾಗಿ ಜೋಳ ಬೆಳೆಯುವ ಈ ರೈತರ ಮಕ್ಕಳಿಗೆ ಮೊದಲನೇ ತರಗತಿಯಿಂದಲೇ ಇಂಗ್ಲಿಷ್ ಕಲಿಸಬೇಕೆಂಬ ಬೇಡಿಕೆ ದಟ್ಟವಾಗಿ ಹಬ್ಬಿರುವುದಾದರೂ ಏಕೆ? ಇಂತಹ ಒಂದು ಸಂದರ್ಭ ಎದುರಾದಾಗ "ರೈತರ ಮಕ್ಕಳು ಏಕೆ ಇಂಗ್ಲಿಷ್ ಕಲಿತು ಮುಂದೆ ಬರಬಾರದು" ಎಂಬ ಪ್ರಶ್ನೆ ಹಾಕುವವರು ಜನಸಾಮಾನ್ಯರಷ್ಟೇ ಅಲ್ಲ. ಇಂತಹ ಪ್ರಶ್ನೆಯನ್ನು ನಮ್ಮ ನಡುವಿನ ಪ್ರಜ್ಞಾವಂತರೂ ಕೇಳುತ್ತಾರೆ. ಅನೇಕ ಪ್ರಾದೇಶಿಕ ವ್ಯತ್ಯಾಸಗಳಿದ್ದರೂ ನಮ್ಮ ದೇಶದ ಶೇಕಡ 82 ಭಾಗ ರೈತರು ಸಣ್ಣ ಹಿಡುವಳಿದಾರರು. ಅವರ ಸರಾಸರಿ ಭೂಮಿಯ ವ್ಯಾಪ್ತಿ ಒಂದರಿಂದ ಮೂರು ಹೆಕ್ಟೇರ್ ದಾಟಲಾರದು. ಸಣ್ಣ ಹಿಡುವಳಿದಾರರೇ ಪ್ರಧಾನವಾಗಿರುವ ನಮ್ಮ ದೇಶದಲ್ಲಿ ಶೇಕಡ ಎಂಬತ್ತರಷ್ಟು ಜನ ವ್ಯವಸಾಯವನ್ನು ಅವಲಂಬಿಸಿ ಬದುಕಬೇಕಾಗಿರುವಾಗ ಕೃಷಿಜೀವನ ಕನಿಷ್ಠವೆಂದು ಪರಿಗಣಿಸುವ ಅವಿವೇಕಕ್ಕೆ ನಾವೆಲ್ಲ ಬಂದು ನಿಂತಿರುವುದಾದರೂ ಹೇಗೆ? ಸರ್ಕಾರದ ಒಂದು ಅಂಕಿಅಂಶಗಳ ಪ್ರಕಾರ ಶೇಕಡ ನಲವತ್ತರಷ್ಟು ರೈತರು ಕೃಷಿಜೀವನವನ್ನು ತೊರೆಯುವ ಸಿದ್ಧತೆಯಲ್ಲಿದ್ದಾರೆ. ಅಥವಾ ತಮ್ಮ ಮಕ್ಕಳಾದರೂ ಕೃಷಿ ಜೀವನವನ್ನು ಅವಲಂಬಿಸದಿರಲಿ, ಬದುಕಿನ ಬೇರೆ ಮಾರ್ಗ ಹುಡುಕಲಿ ಎಂದು ಆಶಿಸುತ್ತಾರೆ. ಈ ಹಿನ್ನೆಲೆಯಲ್ಲಿ ನಮ್ಮ ರಾಷ್ಟ್ರೀಯ

ನೀತಿ ಹೇಗಿದೆ ಎಂದು ಗಮನಿಸೋಣ. 1966-69ರಲ್ಲಿ ವ್ಯವಸಾಯಕ್ಕಾಗಿ ನಾವು ಮೀಸಲಿರಿಸಿದ ಹಣ ಶೇಕಡ 31. ಆದರೆ 2002-2007ರ ಹೊತ್ತಿಗೆ ಶೇಕಡ 10 ಭಾಗ ಬಜೆಟ್ ಅನ್ನು ಮಾತ್ರ ಮೀಸಲಾಗಿಟ್ಟಿದ್ದೇವೆ. ದೇಶದ ಬೆನ್ನೆಲುಬು ವ್ಯವಸಾಯ ಎಂದು ಹೇಳಿಕೊಳ್ಳುವ ನಾವು ರಾಷ್ಟ್ರೀಯ ವಿತ್ತ ನೀತಿಯಲ್ಲಿ ಯಾವುದಕ್ಕೆ ಆದ್ಯತೆ ಕೊಡುತ್ತಿದ್ದೇವೆ? ನಮ್ಮ ಗ್ರಾಮೀಣ ಪ್ರದೇಶದ ಶೇಕಡ ಎಂಬತ್ತರಷ್ಟು ಜನಕ್ಕೆ ಅಗತ್ಯವಾದಷ್ಟು ಕ್ಯಾಲೊರಿಗಳ ಆಹಾರವೇ ಸಿಗುತ್ತಿಲ್ಲ. ಆದರೂ ನಮ್ಮ ಸರ್ಕಾರದ ಕುರುಡು ಆರ್ಥಿಕ ನೀತಿಗೆ ಏನೆನ್ನಬೇಕು? ಇಂತಹ ಒಂದು ಚಿಂತನಕ್ರಮದ ಫಲವಾಗಿ ಹುಟ್ಟುವ ಶಿಕ್ಷಣ ಮಾದರಿಗಳು ಮಕ್ಕಳಿಗೆ ಯಾವ ಹೆಗ್ಗುರಿಯನ್ನು ಹಾಕಿಕೊಡುತ್ತವೆ? ನಮ್ಮ ಈ ಶಿಕ್ಷಣ ಮುಂದಿನ ಪ್ರಜೆಗಳಾಗುವ ನಮ್ಮ ಮಕ್ಕಳಿಗೆ ಈ ಸಾಮಾಜಿಕ ಜವಾಬ್ದಾರಿಗಳನ್ನು ಕುರಿತು ಚಿಂತಿಸಲು ಅನುವುಮಾಡಿಕೊಡುತ್ತಿದೆಯೆ?

ಕೃತಕ ಕನಸುಗಳು

ಬಹಳಷ್ಟು ಪೋಷಕರು ಹೇಳುವ ಮಾತು ಇದು: "ಸದ್ಯ ನಾವು ಪಟ್ಟ ಕಷ್ಟವೇ ಸಾಕು; ಈ ಕಷ್ಟ ನಮ್ಮ ಮಕ್ಕಳಿಗೆ ಬೇಡ". ಈ ಹತಾಶೆಯ ಹಿಂದೆ ಬದುಕಿನ ವಾಸ್ತವತೆಗಳ, ಪರಿಮಿತಿಗಳ ಅರಿವು ಇವರಿಗಿದ್ದರೂ ಇವರು ಕಾಣುವ ಕನಸು ಎಂದರೆ – ತಂತ್ರಜ್ಞಾನದ ಪರಿಣತಿಯನ್ನು ಸಾಧಿಸುವ ಮೂಲಕ ತಮ್ಮ ಮಕ್ಕಳು ಮುನ್ನಡೆಯಲಿ; ಈ ಸಾಮಾನ್ಯವಾದ ಕೃಷಿಜೀವನವನ್ನು ಅಥವಾ ಕಾರ್ಮಿಕ ಜೀವನವನ್ನು ನಡೆಸುವ ಪಾಡು ಅವರಿಗೆ ಎಂದಿಗೂ ಬರದಿರಲಿ ಎಂದು. ಹಾಗಾಗಿ ಕಂಪ್ಯೂಟರ್ ತಂತ್ರಜ್ಞಾನವೋ, ಬಾಹ್ಯಾಕಾಶ ಜ್ಞಾನವೋ ಒಟ್ಟಿನಲ್ಲಿ ಯಾವುದೆಲ್ಲವೂ ಈ ನೆಲದಿಂದ, ಈ ಮಣ್ಣಿನ ವಾಸನೆಯಿಂದ ದೂರವಾಗಿ, ಆದ್ದರಿಂದ ಮಾತ್ರವೇ ಅದ್ವಿತೀಯ ಎನಿಸಿಕೊಳ್ಳುವುದೊ ಆ ಕನಸಿನ ಲೋಕಕ್ಕೆ ಮಕ್ಕಳನ್ನು ಸಿದ್ಧಪಡಿಸುವ ಶಿಕ್ಷಣಕ್ಕೆ ಬೇಡಿಕೆ ಉಂಟಾಗಿದೆ. ಮಣ್ಣಿನೊಡನಾಟದ ಸರಳ ಜೀವನದಲ್ಲೂ ಸಂತೋಷವಿದೆ ಎಂಬ ಸತ್ಯವನ್ನು ನಮ್ಮ ಶಿಕ್ಷಣ ತಿಳಿಸಿಕೊಡುತ್ತಿಲ್ಲ, ಅಗತ್ಯಕ್ಕಿಂತ ಹೆಚ್ಚು ಸಂಗ್ರಹಿಸುವುದು ಸಾಮಾಜಿಕ ಅಪರಾಧವಷ್ಟೇ ಅಲ್ಲ, ಅದು ಬದುಕಿನ ನಿಜವಾದ ಸಂತೋಷಕ್ಕೆ ಕಂಟಕ ಎಂಬ ಸತ್ಯವನ್ನು ತಿಳಿಸಿಕೊಡುತ್ತಿಲ್ಲ. 'ಹಿತ್ತಲ ಗಿಡ ಮದ್ದಲ್ಲ' ಎಂಬ ಗಾದೆ ಯಾವುದು ಸಹಜವಾಗಿ ನಮ್ಮ ಕಾಲಬುಡದಲ್ಲೇ ಸಿಗುತ್ತದೆಯೋ ಮತ್ತು ನಮ್ಮ ನಿಜವಾದ ಆವಶ್ಯಕತೆಗಳನ್ನು ಪೂರೈಸುತ್ತದೆಯೋ ಅದರ ಬಗ್ಗೆ ತಿರಸ್ಕಾರ ಭಾವ ತಾಳುವುದು ಮನುಷ್ಯನ ಸ್ವಭಾವವಾಗಿದೆ. ಈ ದೌರ್ಬಲ್ಯವನ್ನು ಬಂಡವಾಳ ಮಾಡಿಕೊಂಡಿರುವ ಜಾಗತೀಕರಣ ನೈಜವಾಗಿ ಸಿಗುವ ಎಲ್ಲವನ್ನೂ ಕೃತಕ ಆಕಾರ, ಪ್ಯಾಕೇಜುಗಳಲ್ಲಿ ನೀಡಿ ಸಹಜವಾದದ್ದನ್ನು ತಿರಸ್ಕರಿಸುವ ಮತ್ತು ಅಸಹಜ ಮಾಲನ್ನು ದುಬಾರಿ ಬೆಲೆ ಕೊಟ್ಟು ಕಳಪೆ ರೂಪದಲ್ಲಿ ಪಡೆಯುವ ಸಂಸ್ಕೃತಿಯನ್ನು ಹುಟ್ಟುಹಾಕಿದೆ. ಜಾಗತಿಕ ಮಾರುಕಟ್ಟೆಯ ಮೂಲ ಬಂಡವಾಳ ಎಂದರೆ ಹೀಗೆ ಸುಲಭವಾಗಿ ಸಿಗುವ ವಸ್ತುವನ್ನು ಕೃತಕ ಪ್ಯಾಕೇಜುಗಳಲ್ಲಿ ಕೊಡುವ ಮೂಲಕ ಜನರನ್ನು ಮರುಳುಮಾಡುವುದು.

ಒಟ್ಟಿನಲ್ಲಿ ಈ ಮಣ್ಣಿನ ಬದುಕಿನಿಂದ ದೂರವಾಗುವ ಮೂಲಕ ಮಾತ್ರ ಜೀವನದ ಸಾರ್ಥಕತೆಯನ್ನು ಪಡೆಯಬಹುದೆಂಬ ಭ್ರಮೆಯನ್ನು ಸೃಷ್ಟಿಸಿ ತನ್ನ ವಸ್ತುಗಳಿಗೆ ಬೇಡಿಕೆ ಹೆಚ್ಚಿಸಿಕೊಳ್ಳುವುದು ಜಾಗತಿಕ ಮಾರುಕಟ್ಟೆಯ ವಿಧಾನ.

ಶೇಖರಣೆಯ ಸಂಸ್ಕೃತಿ

ಜಾಗತಿಕ ಮಾರುಕಟ್ಟೆಯನ್ನು ನಿಯಂತ್ರಿಸುವ ಪಾಶ್ಚಾತ್ಯ ಸಂಸ್ಕೃತಿಗೆ ಅನಾದಿ ಕಾಲದಿಂದಲೂ ಮರಗಟ್ಟುವ ಚಳಿಯ ಸಮಸ್ಯೆ ಇದೆ. ಇಂತಹ ವಿಷಮ ವಾತಾವರಣದಲ್ಲಿ ಜೀವವೈವಿಧ್ಯವಾಗಲೀ ಅಥವಾ ಆಹಾರ ವೈವಿಧ್ಯತೆಯಾಗಲಿ ಸಾಧ್ಯವಿಲ್ಲ. ವರ್ಷದ ಕೆಲವೇ ತಿಂಗಳುಗಳಲ್ಲಿ ಬೆಳೆ ತೆಗೆದು ಒಕ್ಕಣೆ ಮಾಡಿ ತುರ್ತು ಸಮಯದಲ್ಲಿ ಬಳಕೆಗೆ ಬರುವಂತೆ ಶೇಖರಿಸಿಡುವುದು ಈ ಸಂಸ್ಕೃತಿಯಲ್ಲಿ ಸ್ವಾಭಾವಿಕವಾಗಿ ಬೆಳೆದು ಬಂದ ಜೀವನವಿಧಾನ. ಹಾಗಾಗಿ ಅವರು ಕೃತಕ ಶೇಖರಣಾ ವಿಧಾನಗಳಲ್ಲಿ ಪರಿಣತರು. ಇದು ಅವರ ಸಂಸ್ಕೃತಿಯ ಭಾಗ. ಆದರೆ ಉಷ್ಣವಲಯದಲ್ಲಿ ವಾಸಿಸುವ ನಮಗೆ ಪ್ರಕೃತಿ ಸಾಕಷ್ಟು ಬೆಳಕು ಮತ್ತು ಶಾಖವನ್ನು ಕೊಡುತ್ತದೆ. ವೈವಿಧ್ಯಮಯವಾದ ಸಸ್ಯ-ಪ್ರಾಣಿ ಸಂಕುಲಗಳು ಮಿಲಿಯಾಂತರ ವರ್ಷಗಳಿಂದಲೂ ಈ ನೆಲದಲ್ಲಿ ವಿಕಾಸವಾಗಿವೆ. ಶೀತವಲಯದ ವೈಪರೀತ್ಯಗಳು ನಮ್ಮನ್ನು ಕಾಡುವುದಿಲ್ಲ. ಸಹಜವಾಗಿ ಆಯಾ ಕಾಲದಲ್ಲಿ ಸಿಗುವ ಬಗೆಬಗೆಯ ಆಹಾರವನ್ನು ಋತುಮಾನಕ್ಕೆ ತಕ್ಕಂತೆ ಬಳಸುತ್ತ ನಮ್ಮದೇ ಆದ ಆಹಾರ ಪದ್ಧತಿಯನ್ನು ಬೆಳೆಸಿಕೊಂಡಿದ್ದೇವೆ. ಮಾವಿನ ಹಣ್ಣಿನ ಕಾಲದಲ್ಲಿ ಮಾವು ತಿನ್ನುತ್ತೇವೆ. ಅಕಾಲದಲ್ಲಿ ಮಾವು ತಿನ್ನಬೇಕೆಂಬುದು ಕೆಲವು ರಾಜರ ಬಯಕೆಯೇ ಹೊರತು ಜನಸಾಮಾನ್ಯರು ಇಂತಹದನ್ನೆಲ್ಲ ಊಹಿಸುತ್ತಲೂ ಇರಲಿಲ್ಲ. ಆದರೆ ಫುಡ್ ಪ್ರೊಸೆಸಿಂಗ್ ಪ್ಯಾಕೇಜ್‌ನಂತಹ ತಂತ್ರಜ್ಞಾನ ಹುಟ್ಟಿದ ಮೇಲೆ ಕೃತಕವಾಗಿ ಇವುಗಳನ್ನು ಶೇಖರಿಸಿ ಅಕಾಲದಲ್ಲಿ ತಿನ್ನುವ ಪರಿಪಾಠ ಶುರುವಾಗಿದೆ ಅಥವಾ ಅಡಿಗೆ ಮಾಡದೆ 'ರೆಡಿ ಟು ಈಟ್' ಆಹಾರಗಳನ್ನು ತಿನ್ನುವುದು ಒಂದು ಫ್ಯಾಷನ್ ಆಗಿದೆ. ಇದು ಪಾಶ್ಚಾತ್ಯ ನೆಲದ ಆವಶ್ಯಕತೆಯೇ ಹೊರತು ನಮ್ಮ ವಾತಾವರಣಕ್ಕೆ ಇಂತಹ ಸರ್ಕಸ್‌ಗಳ ಅಗತ್ಯವೇ ಇಲ್ಲ. ಆದರೆ ಜಾಗತಿಕ ಮಾರುಕಟ್ಟೆ ಜಾಹೀರಾತುಗಳ ಮೂಲಕ ಮನುಷ್ಯನಲ್ಲಿ ಕೃತಕ ಆವಶ್ಯಕತೆಗಳನ್ನು ಹುಟ್ಟುಹಾಕಿದೆ. ಇದರ ಪರಿಣಾವೇನೆಂದರೆ ಸ್ವಾಭಾವಿಕವಾಗಿ ಸಿಗುವ ವಸ್ತುಗಳನ್ನು ಕೃತಕಗೊಳಿಸಿ ಸೇವಿಸಬೇಕಾದ ಅಥವಾ ಸೇವಿಸಲು ಬಯಸುವ ವಿಚಿತ್ರ ಸಂದರ್ಭ ಏರ್ಪಟ್ಟಿದೆ. ಹೀಗೆ 'ಫುಡ್ ಪ್ರೊಸೆಸಿಂಗ್' ಮಾಡುವುದರಿಂದ ಆಹಾರ ತನ್ನ ಗುಣಮಟ್ಟ ಕಳೆದುಕೊಳ್ಳುವುದಷ್ಟೇ ಅಲ್ಲ; ಈ ಕೃತಕ ಪ್ಯಾಕೇಜ್‌ಗಾಗಿ ಹೆಚ್ಚುವರಿ ಹಣ ತೆರಬೇಕಾದ್ದು ಕೊಳ್ಳುಗ. ಜೊತೆಗೆ ಹೀಗೆ ಮಾಡಿದ ಪ್ಯಾಕಿಂಗ್ ವಸ್ತುಗಳು ಎಂದರೆ ಪ್ಲಾಸ್ಟಿಕ್, ಟಿನ್ ಇತ್ಯಾದಿ ವಸ್ತುಗಳು ಪರಿಸರದ ಮೇಲೆ ಒತ್ತಡವನ್ನು ಹೇರುತ್ತವೆ. ನಿಸರ್ಗ ಹಾಳಾಗುತ್ತದೆ. ಕಂಪನಿಗಳು ದೈತ್ಯಾಕಾರವಾಗಿ ಬೆಳೆಯುತ್ತವೆ. ಇಷ್ಟೆಲ್ಲಾ

ಕಸರತ್ತುಗಳಿಂದ ಕೊನೆಗೆ ಮನುಷ್ಯ ಪಡೆದ ಲಾಭವೇನು? ಬಯಸಿದ ಕೂಡಲೇ ಕೈಗೆಟುಕುವ ತಿನ್ನುವ ವಸ್ತುಗಳು! 'ನ್ಯೂಡಲ್ಸ್ ಸಂಸ್ಕೃತಿ' ಯನ್ನೇ ನೋಡಿ. ನ್ಯೂಡಲ್ಸ್ ತಿನ್ನುವವರು ಅಡಿಗೆ ಮಾಡಲು ಸಮಯವಿಲ್ಲದವರಷ್ಟೆ ಅಲ್ಲ ಕುತೂಹಲಕ್ಕಾಗಿ ಕೆಲವರು, ಆಕರ್ಷಕ ಪ್ಯಾಕಿಂಗ್‌ಗಳ ಕಾರಣದಿಂದ ಕೆಲವರು, ರುಚಿಗಾಗಿ ಕೆಲವರು ಅದರ ಬೆನ್ನಹಿಂದೆ ಬಿದ್ದಿದ್ದಾರೆ. ಹೀಗೆ ಸ್ವಾಭಾವಿಕವಾಗಿ ಆಚರಣೆಯಲ್ಲಿದ್ದ ಆರೋಗ್ಯಕರ ಆಹಾರ ಪದ್ಧತಿಯನ್ನು ಕೃತಕವಾದ ಅನಾರೋಗ್ಯಕರ ಆಹಾರ ಪದ್ಧತಿಗೆ ಬದಲಾಯಿಸಿಕೊಳ್ಳುವುದೇ ಪ್ರಗತಿಯ ಸಂಕೇತ ಎಂದು ಭಾವಿಸುವ ಮೂರ್ಖತನಕ್ಕೆ ನಾವೆಲ್ಲಾ ಬಂದು ನಿಂತಿದ್ದೇವೆ.

ಶಾಲಾವ್ಯವಸ್ಥೆ ಮತ್ತು ಸ್ವಂತಿಕೆ

ನಮ್ಮ ಶಾಲಾಶಿಕ್ಷಣ ಬದಲಾಗುತ್ತಿರುವ ಈ ಕುರಿತು ಅರಿವು ಮೂಡಿಸಬೇಡವೆ? ಒಂದು ವೇಳೆ ಹೀಗೆ ಅರಿವು ಮೂಡಿಸಬೇಕಾದರೆ ಶಾಲಾ ವ್ಯವಸ್ಥೆ ಪ್ರತ್ಯಕ್ಷವಾಗಿಯೋ ಅಥವಾ ಪರೋಕ್ಷವಾಗಿಯೋ ಜಾಗತಿಕ ಮಾರುಕಟ್ಟೆಯ ಹಿಡಿತಕ್ಕೆ ಸಿಲುಕಬಾರದು. ಅಥವಾ ಶಾಲೆಯೊಂದು ತನ್ನ ವಿದ್ಯಾರ್ಥಿಗಳನ್ನು ಜಾಗತೀಕರಣ–ಜಾಗತಿಕ ಮಾರುಕಟ್ಟೆಯ ಬಳಕೆದಾರರಾಗಿ ಬೆಳೆಯಬೇಕೆಂದೂ ಅದು ಪ್ರಗತಿಯ ಸಂಕೇತವೆಂದೂ ಭಾವಿಸಬಾರದು. ಶಾಲಾ ವ್ಯವಸ್ಥೆಗೆ, ಎಂದರೆ ಮುಖ್ಯೋಪಾಧ್ಯಾಯರಿಂದ ಹಿಡಿದು ಎಲ್ಲ ಅಧ್ಯಾಪಕರವರೆಗೆ ಒಂದು ಸ್ವಂತಿಕೆ ಇರಬೇಕು; ಸ್ವತಂತ್ರವಾದ ಒಂದು ನಿಲುವು ಇರಬೇಕು. ಆಗ ಇಂತಹ ವ್ಯವಸ್ಥೆ ಜಾಗತೀಕರಣದ ತಾಳಕ್ಕೆ ತಕ್ಕಂತೆ ಕುಣಿಯುವುದಿಲ್ಲ. ಯಾವ ವ್ಯವಸ್ಥೆಗೆ ಸ್ವಂತ ನಿಲುವು ಇದೆಯೋ ಅದು ತನ್ನ ವಿದ್ಯಾರ್ಥಿಗಳಿಗೂ ಈ ಸ್ವಂತಿಕೆಯನ್ನು ಕೊಡುತ್ತದೆ. ಶಾಲಾ ವ್ಯವಸ್ಥೆ ಸಮಾಜದ ಬಹುಮುಖ್ಯ ಅಂಗ. ಅದು ಜನಮರುಳೋ ಜಾತ್ರೆಮರುಳೋ ಎಂಬಂತೆ ತನ್ನ ಸ್ವಂತಿಕೆಯನ್ನು ಕಳೆದುಕೊಂಡರೆ ಇವರು ಹುಟ್ಟುಹಾಕಿದ ಶಾಲಾವ್ಯವಸ್ಥೆಯೂ ತನ್ನತನ ಕಳೆದುಕೊಂಡುಬಿಡುತ್ತದೆ. ಈ ಶಾಲೆಯಲ್ಲಿ ಕಲಿತ ಮಕ್ಕಳು ಕೂಡ ಸ್ವಂತಿಕೆ ಇಲ್ಲದ, ಅನುಕರಣಾ ಪರಿಣತಿಯನ್ನು ಗಳಿಸಿಕೊಂಡ 'ಆಧುನಿಕ'ರಾಗುತ್ತವೆ. ಹೀಗೆ ಶಾಲೆಗಳು ಸಮಾಜಕ್ಕೆ ಅಂಟಿದ ಖಾಯಿಲೆಯನ್ನು ಗುಣಪಡಿಸುವ ಬದಲು ಹೆಚ್ಚಿಸುತ್ತವೆ.

ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಈ ಬಗ್ಗೆ ಏನಾದರೂ ಚರ್ಚಿಸಿದೆಯೇ? ಒಳ್ಳೆಯದನ್ನು ಕೊಡಿ ಎಂದು ಹೇಳುವುದಕ್ಕಿಂತ ಇಂದಿನ ದಿನಗಳಲ್ಲಿ ಕೆಟ್ಟದ್ದು ಯಾವುದು ಮತ್ತು ಏಕೆ ಇದು ಕೆಟ್ಟದ್ದು ಎಂದು ಗುರುತಿಸುವುದೇ ಬಹುಮುಖ್ಯ. ಮಕ್ಕಳನ್ನು ಯಾವುದಕ್ಕಾಗಿ ಸಜ್ಜುಗೊಳಿಸಬೇಕು ಎಂದು ನಿರ್ಧರಿಸುವಂತೆ ಯಾವುದರ ವಿರುದ್ಧ ಸಜ್ಜುಗೊಳಿಸಬೇಕೆಂದೂ ನಾವು ವಿಚಾರ ಮಾಡಬೇಕು. ನಮ್ಮ ಮಕ್ಕಳು ಏನನ್ನು ಆದರಿಸಬೇಕು, ಏನನ್ನು ಕಲಿಯಬೇಕು ಎಂದು ನಿರ್ಧರಿಸಿ ಅವುಗಳನ್ನು ಕಲಿಸುತ್ತೇವೆ. ಆದರೆ ಯಾವುದನ್ನು ಮಕ್ಕಳು ವಿರೋಧಿಸಬೇಕು ಎಂಬ ಬಗ್ಗೆ ನಮಗೆ ಅರಿವಿದ್ದರೂ ಈ ವಿಚಾರವಾಗಿ ನಾವು ಮಕ್ಕಳನ್ನು ತಯಾರು ಮಾಡುವ ಗೋಜಿಗೆ ಹೋಗುವುದಿಲ್ಲ. ಅಧ್ಯಾಪಕನಾದವನು ಇದು ತನ್ನ ಜವಾಬ್ದಾರಿ ಅಲ್ಲ ಎಂದು ಭಾವಿಸುವುದೇ ಹೆಚ್ಚು.

ತಂತ್ರಜ್ಞಾನದ ಹೊಸ ಸಾಧ್ಯತೆಗಳು

ನಿಜವಾದ ಬದಲಾವಣೆ ಸಾಧ್ಯವಾಗುವುದು ನಾವು ಹಾನಿಕರವಾದದ್ದನ್ನು ವಿರೋಧಿಸಿ ಕಾರ್ಯಾಚರಣೆಯಲ್ಲಿ ತೊಡಗಿದಾಗ ಮಾತ್ರ. ಒಳ್ಳೆಯದನ್ನು ಕಲಿಯುವುದು ಕಷ್ಟ ಆದರೆ ಕೆಟ್ಟದ್ದನ್ನು ವಿರೋಧಿಸುವುದು ಅದಕ್ಕಿಂತ ಕಷ್ಟ ಹಾಗಾಗಿ ಕೆಟ್ಟದ್ದು ಒಳ್ಳೆಯದರ ಜೊತೆ ಸಮಾನಾಂತರವಾಗಿ ಬೆಳೆಯುತ್ತಲೇ ಇದೆ. ಕೆಲವೊಮ್ಮೆ ಒಳ್ಳೆಯದಕ್ಕಿಂತ ಕೆಟ್ಟದ್ದು ಹೆಚ್ಚು ಪ್ರಬಲವಾಗಿ ನಮ್ಮ ಸಂಸ್ಕೃತಿಯಲ್ಲಿ ನೆಲೆಯೂರಿದೆ. ನಮ್ಮ ಇಡೀ ಸಂಸ್ಕೃತಿಯ ಬೆಳವಣಿಗೆಯನ್ನೇ ನೋಡಿ. ಸಾಂಸ್ಕೃತಿಕ ಚರಿತ್ರೆಯಲ್ಲಿ ಸಾಂಸ್ಕೃತಿಕವಾಗಿ ಇತ್ಯಾತ್ಮಕ ಅಂಶಗಳ ಜೊತೆಗೆ ಜಾತಿಪದ್ಧತಿಯಂತಹ ನೇತ್ಯಾತ್ಮಕ ಅಂಶಗಳು ಸಮಾನಾಂತರವಾಗಿ ಹಾಗೆಯೇ ಉಳಿದುಕೊಂಡುಬಂದಿವೆ. ಹಲವಾರು ಪುರಾತನ ಸಂಸ್ಕೃತಿಗಳು ಕೊನೆಗೆ ನಶಿಸಿಹೋಗುವುದಕ್ಕೆ ಕಾರಣ ಅವು ಸವೆಸಿದ ಹಾದಿಯುದ್ದಕ್ಕೂ ಸಂಗ್ರಹಮಾಡಿಕೊಂಡು ಬಂದ ನೇತ್ಯಾತ್ಮಕ ಅಂಶಗಳ ದುಷ್ಪರಿಣಾಮ. ನೇತ್ಯಾತ್ಮಕ ಅಂಶಗಳು ಸೈತಾನನ, ಮಾರನ ರೂಪದಲ್ಲಿ ವ್ಯಕ್ತಿಯ ವೈಯಕ್ತಿಕ ನೆಲೆಗಟ್ಟಿನಲ್ಲಿ ಕಾಡುವಂತೆ ಸಮಾಜವನ್ನೂ ಹಾಗೂ ಒಂದು ಸಂಸ್ಕೃತಿಯನ್ನೂ ಕಾಡುತ್ತವೆ. ಆದರೆ ಶಿಕ್ಷಣ ಪ್ರಬುದ್ಧವಾದಂತೆ ಈ ನೇತ್ಯಾತ್ಮಕತೆಯನ್ನು ತೊಡೆದುಹಾಕಲು ಸಾಧ್ಯವಾಗಬೇಕು. ರಾಮಕೃಷ್ಣ ಪರಮಹಂಸರು ಹೀನ ಸಂಸ್ಕಾರಗಳನ್ನು ಸಂಗ್ರಹಿಸಿಕೊಂಡ ವ್ಯಕ್ತಿಯ ಬಗ್ಗೆ ಆಡುವ ಮಾತುಗಳು ಈ ಸಂದರ್ಭದಲ್ಲಿ ನೆನಪಿಗೆ ಬರುತ್ತದೆ. ಬುದ್ಧಿವಂತರಾದ ಜನ ಮೊದಮೊದಲು ತಮ್ಮೊಳಗಿರುವ ಹೀನ ಸಂಸ್ಕಾರಗಳನ್ನು ಮುಚ್ಚಿಟ್ಟುಕೊಂಡು ಶುಕ್ಲಪಕ್ಷದ ಚಂದ್ರನಂತೆ ವರ್ಧಿಸುತ್ತಾ ಹೋಗುತ್ತಾರೆ. ಇದು ಹೇಗೆಂದರೆ ಕೆಲವು ಉರುಟಾದ ಹಸಿ ಸೌದೆಗಳು ಮೊದಮೊದಲು ಧಗಧಗನೆ ಚೆನ್ನಾಗಿ ಉರಿಯುವಂತೆ. ಆದರೆ ಅವುಗಳಲ್ಲಿರುವ ನೀರಿನ ಅಂಶ ನಿಧಾನವಾಗಿ ಹಿಂದೆ ಸರಿದು ಹಿಂಬದಿಯಿಂದ ಹೊರಬಂದು ಇಡೀ ಒಲೆಯನ್ನು ಆರಿಸಿಬಿಡುತ್ತದೆ. ಕೆಲವು ವ್ಯಕ್ತಿಗಳು ಮೊದಮೊದಲು ಉತ್ತಮ ಆದರ್ಶಗಳನ್ನು ರೂಢಿಸಿಕೊಂಡಂತೆ ಕಂಡರೂ ಸಮಯ ಕಳೆದಂತೆ ಅವರ ಒಳಗೇ ಇರುವ ನಿಜಸ್ವಭಾವ ಹೀಗೆ ಹೊರಹೊಮ್ಮಿಬಿಡುತ್ತದೆ ಎಂದು ಉದಾಹರಿಸುತ್ತಾರೆ ರಾಮಕೃಷ್ಣರು. ಇದು ವ್ಯಕ್ತಿಗೆ ಅನ್ವಯವಾಗುವಂತೆ ಒಂದು ಜನಾಂಗಕ್ಕೆ ಅಥವಾ ಒಂದು ಸಂಸ್ಕೃತಿಗೂ ಅನ್ವಯವಾಗುತ್ತದೆ. ವ್ಯಕ್ತಿ ಇದಕ್ಕೆ ಮುಖಾಮುಖಿಯಾಗಿ ಪರಿಹರಿಸಿಕೊಳ್ಳಲೇಬೇಕು,ಹಾಗೆಯೇ ಸಮಾಜವೂ ಕೂಡ. ಬುದ್ಧಿಪೂರ್ವಕವಾಗಿ ಇದನ್ನು ಮಾಡದಿದ್ದರೆ ವ್ಯಕ್ತಿ–ಸಮಾಜದ ನೇತ್ಯಾತ್ಮಕತೆಗಳು ಒಂದಕ್ಕೊಂದು ಪೂರಕವಾಗಿ ಕೆಲಸ ಮಾಡುತ್ತ ಇಡೀ ಸಮಾಜ ನೇತ್ಯಾತ್ಮಕವಾಗುತ್ತದೆ.

ಇಂತಹ ಒಂದು ಸಂದರ್ಭದಲ್ಲಿ **ಆಧುನಿಕ ತಂತ್ರಜ್ಞಾನದ ಕೆಲವು ಇತ್ಯಾತ್ಮಕ ಅಂಶಗಳನ್ನು** ಬಳಸಿಕೊಳ್ಳುವ ಸಾಧ್ಯತೆಯನ್ನು ನಾವು ಮನಗಾಣಬೇಕು. ಹೊಸ ತಂತ್ರಜ್ಞಾನದ ಸಂಪರ್ಕಸಾಧ್ಯತೆಗಳು ಸಮೂಹ ಮನಸ್ಸಿನಲ್ಲಿ ಅಂತರ್ಗತವಾಗಿರುವ ನೇತ್ಯಾತ್ಮಕತೆಯನ್ನು ತೊಡೆದುಹಾಕಲು ನಮಗೆ ಸಹಾಯ ಮಾಡಲಾರದೆ? ಆಧುನಿಕ ತಾಂತ್ರಿಕ ಪ್ರಗತಿಯ

ಫಲಶ್ರುತಿ ಯಾವಾಗಲೂ ನೇತ್ಯಾತ್ಮಕವಾಗಿಯೇ ಇರಬೇಕೆಂದೇನೂ ಇಲ್ಲ. ಮನುಕುಲ ಈವರೆಗೆ ತಾನು ಪಡೆದಿರುವ ಅನುಭವದ ಆಧಾರದ ಮೇಲೆ ತನಗೆ ಯಾವುದು ಒಳ್ಳೆಯದು ಮತ್ತು ಯಾವುದು ಕೆಟ್ಟದ್ದು ಎಂದು ನಿರ್ಧರಿಸುವ ಹಂತಕ್ಕೆ ಬರುವ ಅನಿವಾರ್ಯತೆ ಈಗ ತಲೆದೋರಿದೆ. ಇದು ಕೆಲವೇ ವ್ಯಕ್ತಿಗಳಲ್ಲಿ ಹುಟ್ಟಿದ ಜಾಗೃತಿಯಾದರೂ ಜಾಹೀರಾತಿನಂತಹ ತಂತ್ರಗಾರಿಕೆಯನ್ನು ಬಳಸಿ ಇತ್ಯಾತ್ಮಕವಾದದ್ದು ಜನಪ್ರಿಯವಾಗುವಂತೆ ಮಾಡಬಹುದು. ನಮ್ಮ ಇಂದಿನ ಶಿಕ್ಷಣವೂ ಇದನ್ನು ಮತ್ತಷ್ಟು ದೃಢಪಡಿಸಿದರೆ ಇತ್ಯಾತ್ಮಕ ತಿರುವು ಸಾಧ್ಯ.

ಸಹಜವಾದದ್ದು ಶ್ರೇಷ್ಠ

ಜಾಗತಿಕ ಮಾರುಕಟ್ಟೆಯ ಜಾಹೀರಾತುಗಳಿಂದಾಗಿ 'ಅಸಹಜವಾದದ್ದು ಯಾವಾಗಲೂ ಶ್ರೇಷ್ಠ' ಎಂಬ ತಪ್ಪು ಕಲ್ಪನೆಗೆ ನಮ್ಮ ಇಂದಿನ ಜನ ಅದರಲ್ಲೂ ಮುಖ್ಯವಾಗಿ ಮಕ್ಕಳು ಒಳಗಾಗುತ್ತಿರುವುದು ಇಂದಿನ ದುರಂತ. ಇಂದಿನ ಶಿಕ್ಷಣ ಗಟ್ಟಿಗೊಳಿಸುತ್ತಿರುವುದು ಈ ಭಾವನೆಗಳ ವಿಸ್ತೃತ ರೂಪವನ್ನೇ ಅಲ್ಲವೇ? ಒಂದು ಶೈಕ್ಷಣಿಕ ವಿಚಾರ ಸಂಕಿರಣದಲ್ಲಿ ಒಬ್ಬಾತ ಎದ್ದು ನಿಂತು ತನ್ನ ವಾದವನ್ನು ಹೀಗೆ ಮಂಡಿಸಿದ – "ಇಂದು ಸಾಫ್ಟ್‌ವೇರ್ ಜಗತ್ತು ಬೆಳೆಯುತ್ತಿದೆ, ಉತ್ತಮ ಉದ್ಯೋಗಾವಕಾಶಗಳು ಅದರಿಂದ ಹುಟ್ಟುತ್ತಿವೆ, ಹಾಗಾಗಿ ನಾವು ನಮ್ಮ ಮಕ್ಕಳನ್ನು ಈ ಸಾಫ್ಟ್‌ವೇರ್ ಜಗತ್ತಿಗೆ ಸಿದ್ಧಪಡಿಸಬೇಕು, ಪ್ರಾಥಮಿಕ ಶಾಲೆಯಲ್ಲಿಯೇ ನಾವು ಮಕ್ಕಳನ್ನು ಇದಕ್ಕಾಗಿ ತಯಾರು ಮಾಡಬೇಕು." – ಈ ಮಾತುಗಳನ್ನು ಕೇಳಿ ನಾನು ದಿಗ್ಭ್ರಾಂತನಾದೆ. ದೇಶದ ಬೆರಳೆಣಿಕೆಯಷ್ಟು ಜನ ಮಾತ್ರ ಹೀಗೆ ಸಾಫ್ಟ್‌ವೇರ್ ಇಂಜಿನಿಯರ್‌ಗಳಾಗಬಹುದು. ಈ ಸತ್ಯ ಎದುರಿಗಿರುವಾಗ ಇಡೀ ಶಿಕ್ಷಣ ವ್ಯವಸ್ಥೆ ಈ ಅಲ್ಪಸಂಖ್ಯಾತರ ಹಿತವನ್ನಷ್ಟೇ ಗಮನದಲ್ಲಿಟ್ಟುಕೊಳ್ಳಬೇಕೆಂಬ ವಾದದ ಹಿಂದಿರುವ ಮನಸ್ಸಾದರೂ ಎಂತಹದು? ಇವರಿಗೆ ಈ ದೇಶದ ಗ್ರಾಮೀಣ ಜನರು ಕಾಣಿಸುತ್ತಲೇ ಇಲ್ಲವೆ? ಆಶ್ಚರ್ಯವೆಂದರೆ, ಅಲ್ಲಿ ಸೇರಿದ್ದ ಬಹಳಷ್ಟು ಶಿಕ್ಷಣ ಕ್ಷೇತ್ರದ ಪರಿಣಿತರು ಇದನ್ನು ಸಮರ್ಥಿಸಿದರು. ಹೀಗೆ ಶಿಕ್ಷಣವನ್ನು ಕುರಿತು ವಿಶಿಷ್ಟವಾಗಿ ಚಿಂತಿಸುವ ಜನಗಳೇ ಈ ಸಾಫ್ಟ್‌ವೇರ್ ವ್ಯಾಧಿಗೆ ತುತ್ತಾದರೆ ಇನ್ನು ಜನಸಾಮಾನ್ಯರ ಪಾಡು ಏನು?

ಸಹಜವಾದದ್ದು ಶ್ರೇಷ್ಠ ಎಂಬ ಭಾವನೆ ಪ್ರತಿ ಮಕ್ಕಳಲ್ಲೂ ಮೂಡುವಂತೆ ಮಾಡಬೇಕಾದ್ದು ಇಂದಿನ ಶಿಕ್ಷಣದ ಮುಖ್ಯ ಗುರಿಯಾಗಬೇಕು. ಜಾಗತೀಕರಣ – ಜಾಗತಿಕ ಮಾರುಕಟ್ಟೆಯ ವಿರುದ್ಧ ಮನುಕುಲ ಸಾರಬಹುದಾದ ಸಮರದಲ್ಲಿ ಶಿಕ್ಷಣವೇ ಪರಿಣಾಮಕಾರಿ ಅಸ್ತ್ರ. ಈ ಸಮರ ಕೆಲವು ಪೀಳಿಗೆಗಳ ಪರ್ಯಂತ ನಡೆಯಬೇಕಾದ್ದು ಅನಿವಾರ್ಯ. ಸಹಜವಾದದ್ದು ಶ್ರೇಷ್ಠ ಎಂಬುದು ಕೇವಲ ತತ್ತ್ವವಲ್ಲ. ಅದು ಜೀವನದ ವಾಸ್ತವ ಕೂಡ. ಎಲ್ಲವೂ ಸಹಜ ಸ್ಥಿತಿಗೆ ಮರಳುವುದು ಅಸಹಜ ಪಲ್ಲಟಗಳಲ್ಲಿ

ಕಂಡುಬರುವ ಸ್ವಾಭಾವಿಕ ವಿದ್ಯಮಾನ. ಹಾಗಾಗಿ ಸಹಜ ಸ್ಥಿತಿಗೆ ಮರಳುವ ತುಡಿತ ಮನುಷ್ಯ ಸ್ವಭಾವದಲ್ಲಿಯೇ ಅಂತರ್ಗತವಾಗಿರುತ್ತದೆ. ಜೊತೆಗೆ ಇಡೀ ಪ್ರಕೃತಿ ಇದನ್ನು ಅನಿವಾರ್ಯವಾಗಿಸುತ್ತದೆ. ಮಾಡು ಇಲ್ಲವೇ ಮಡಿ ಎಂಬಂತೆ 'ಸಹಜವಾಗಿ ಬದುಕು ಇಲ್ಲವೇ ಸತ್ತು ಹೋಗು' ಎಂಬ ಅನಿವಾರ್ಯತೆಯನ್ನು ಪ್ರಕೃತಿ ಉಂಟು ಮಾಡುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಶಿಕ್ಷಣವೂ ಈ ತಿರುವಿಗೆ ಪೂರಕವಾಗಿರುವುದಾದರೆ ಅದು ಪರಿಣಾಮಕಾರಿಯಾದೀತು. ಹಾಗಾಗಿ **'ಸಹಜವಾದದ್ದು ಶ್ರೇಷ್ಠ"** ಎಂಬ ಮನೋಭಾವನೆಯನ್ನು ಬಿತ್ತುವುದು ಶಿಕ್ಷಣದ ಗುರಿಯಾಗಬೇಕು.

ವಿಚಾರಶೀಲತೆಯ ಅಭಾವ

ಎಲ್ಲರೂ ಕೃಷಿಜೀವನವನ್ನು ಕೈಬಿಟ್ಟು ಪಟ್ಟಣ ಸೇರಿದರೆ ಜನಕ್ಕೆ ಆಹಾರಧಾನ್ಯಗಳು ಎಲ್ಲಿಂದ ಬರಬೇಕು? ಇಂತಹ ಒಂದು ಪರಿಸ್ಥಿತಿ ಉಂಟಾಗಬಹುದೊ ಇಲ್ಲವೋ ಅದು ಬೇರೆ ವಿಷಯ. ಆದರೆ ಇಂತಹ ಒಂದು ಪ್ರಶ್ನೆ ನಮ್ಮ ಜನಗಳಿಗೆ ಎದುರಾಗುವುದೇ ಇಲ್ಲ. ಏಕೆಂದರೆ, ಈ ಸ್ಪರ್ಧಾತ್ಮಕ ಜಗತ್ತಿನಲ್ಲಿ ನಮ್ಮ ಮಕ್ಕಳನ್ನು ಗೆಲ್ಲುವಂತೆ ನಾವು ತಯಾರು ಮಾಡಿದರೆ ಸಾಕು. ಸೋತವರು ಹೇಗೂ ಕೃಷಿ ಜೀವನಕ್ಕೋ, ಬವಣೆಯ ಬದುಕಿಗೋ ಮರಳುತ್ತಾರೆ. ಇದರ ಒಟ್ಟು ಸಾರಾಂಶ ಏನೆಂದರೆ, ಬುದ್ಧಿವಂತರಲ್ಲದವರು ವಾಸ್ತವ ಬದುಕಿಗೆ ಅವಶ್ಯವಾದ ಉತ್ಪಾದನೆಯಲ್ಲಿ ತೊಡಗುತ್ತಾರೆ. ಅತಿ ಬುದ್ಧಿವಂತರು, ತಂತ್ರಜ್ಞಾನ ಪರಿಣತರು ಮನುಷ್ಯನ ಐಷಾರಾಮಿ ಬದುಕಿನ ಕೃತಕ ಆವಶ್ಯಕತೆಗಳನ್ನು ಪೂರೈಸುವ ಉತ್ಪಾದನೆಯಲ್ಲಿ ತೊಡಗುತ್ತಾರೆ. ಎಂದರೆ ನನ್ನ ಬದುಕು ನನ್ನ ಸುತ್ತಲೂ ಬದುಕುತ್ತಿರುವ ಹುಲುಮಾನವರಿಗಾಗಿ ಅಲ್ಲ; ಅದು ಏನಿದ್ದರೂ ಚಮತ್ಕಾರದ ಬದುಕು ಸಾಗಿಸುವವರಿಗಾಗಿ ಮೀಸಲು! ಸರಳವಾದ ಬದುಕನ್ನು ಸರಳವಾಗಿ ಬದುಕುವುದರಲ್ಲಿ ನಮ್ಮ ಸುಶಿಕ್ಷಿತರು ಸೌಂದರ್ಯವನ್ನು ಕಾಣುವುದಿಲ್ಲ ಏಕೆ? ಯಾವ ಸಾರ್ಥಕತೆಯನ್ನೂ ಕಾಣುವುದಿಲ್ಲ ಏಕೆ? ಇವರ ಜೀವನಸಾಫಲ್ಯವೇ ಬೇರೆ. ಇವರು ತಮ್ಮ ಅಂತರಂಗದ ದನಿಯನ್ನು ಆಲಿಸಿ ಜೀವನ ಸಾಫಲ್ಯವನ್ನು ಕಂಡುಕೊಳ್ಳುವುದಿಲ್ಲ. ಏಕೆಂದರೆ ಇವರು ತಮ್ಮ ಆಂತರ್ಯದ ನೆಲೆಗಳಿಂದ ಈಗಾಗಲೆ ಬಹುದೂರ ತೇಲಿಬಂದಿದ್ದಾರೆ. ಜಾಗತೀಕರಣದ ಪ್ರವಾಹ ಇವರನ್ನು ಇವರ ನೈಜನೆಲೆಗಳಿಂದ ಬಹುದೂರ ಸೆಳೆದುಕೊಂಡು ಹೋಗಿದೆ. ಜಾಗತೀಕರಣದ ಒತ್ತಡಗಳಿಗೆ ಒಳಗಾಗಿ ಇವರ ಜೀವನ ಸಾಫಲ್ಯ ರೂಪುಗೊಳ್ಳುತ್ತದೆ. ಜಾಗತೀಕರಣದ ಆಮಿಷಗಳಿಗೆ ಪೂರಕವಾದ ದೌರ್ಬಲ್ಯಗಳು ಮನುಷ್ಯಸಹಜವಾಗಿ ಇವರೊಳಗೆ ಈಗಾಗಲೇ ಇದೆ. ಎಂದರೆ ತಂತ್ರಜ್ಞಾನ ಒದಗಿಸುವ ಸೌಕರ್ಯಗಳು ಇವರ ಮನಸ್ಸನ್ನು ಸೂರೆಗೊಂಡಿದೆ. ಇದಕ್ಕೆ ಮರುಳಾಗದೆ ಇರುವಷ್ಟು ವಿಚಾರಶೀಲತೆಯನ್ನು ಇವರು ಬೆಳೆಸಿಕೊಂಡಿಲ್ಲ. ಅಥವಾ ಅಂತಹ ವಿಚಾರಶೀಲತೆ ಬೆಳೆಯಲು ಪೂರಕವಾದ ಅಂಶಗಳು ನಮ್ಮ ಇಂದಿನ ಸಮಾಜದಲ್ಲಾಗಲೀ ಅಥವಾ ನಮಗೆ ಸಿಗುತ್ತಿರುವ ಶಿಕ್ಷಣದಲ್ಲಾಗಲೀ ಕಂಡುಬರುತ್ತಿಲ್ಲ. ಹಾಗಾಗಿ ತಂತ್ರಗಾರಿಕೆ ಒದಗಿಸುವ

ಯಾವುದೇ ಸೌಕರ್ಯ ಸಲಕರಣೆ ಇದ್ದರೂ ಅವೆಲ್ಲವೂ ಬೇಕು, ಅವುಗಳನ್ನು ಗಳಿಸುವುದೇ ಜೀವನಸಾಫಲ್ಯ ಎಂಬ ನಿಲುವಿಗೆ ಸಮಸ್ತ ಜನಕೋಟಿ ಬಂದು ನಿಂತಂತಿದೆ. ತಂತ್ರಜ್ಞಾನದ ಪ್ರಗತಿಯಿಂದಾಗಿ ಎಲ್ಲವೂ ನಿರೀಕ್ಷೆಯಂತೆ ನಡೆದುಬಿಡುತ್ತದಾದ್ದರಿಂದ ಸರಳ ಬದುಕಿನಲ್ಲಿ ಸವಾಲುಗಳೇ ಇಲ್ಲ. ಆದ್ದರಿಂದ ಬದುಕಿನಲ್ಲಿ ಅಸಹಜವಾದ ಹೊಸ ಸವಾಲುಗಳನ್ನು ಸೃಷ್ಟಿಸಿ ಸಮರ್ಥರು ಎನಿಸಿಕೊಂಡವರ ನಡುವೆ ಹಾವು-ಏಣಿ ಆಟವಾಡುವುದೇ ಬದುಕಿನ ಸ್ವಾರಸ್ಯ ಎಂದು ಇವರು ಭಾವಿಸುತ್ತಾರೆ.

ಇದೇ ಸಾಮ್ರಾಜ್ಯಶಾಹಿ ಮನಸ್ಸು. ಆದಿಮಾನವನಾಗಿದ್ದಾಗ ಮನುಷ್ಯ ತನ್ನ ಈ ಮಹತ್ವಾಕಾಂಕ್ಷೆಯ ಮಿಡಿತಕ್ಕೆ ದೊಡ್ಡ ದೊಡ್ಡ ಪ್ರಾಣಿಗಳನ್ನು ಬಹುಶಃ ಬೇಟೆಯಾಡಿ ತನ್ನ ಸಾಮರ್ಥ್ಯವನ್ನು ತಾನೇ ಖಚಿತಪಡಿಸಿಕೊಳ್ಳುತ್ತಿದ್ದ. ನಂತರ ಸೈನ್ಯವನ್ನು ಸೇರಿಸಿ ತನ್ನ ಕತ್ತಿಯ ಬಲದಿಂದ ಸಾಮ್ರಾಜ್ಯಗಳನ್ನು ಕಟ್ಟಿ ತನ್ನ ಸಾಮರ್ಥ್ಯವನ್ನು ಖಚಿತಪಡಿಸಿಕೊಂಡಿದ್ದ. ಈಗ ತನ್ನ ಬುದ್ಧಿಯ ಬಲದಿಂದ ಜಾಗತಿಕ ಮಟ್ಟದ ಕಂಪನಿಗಳನ್ನು ಕಟ್ಟಿ ತನ್ನ ಸಾಮರ್ಥ್ಯವನ್ನು ತಾನೇ ಖಚಿತಪಡಿಸಿಕೊಳ್ಳುತ್ತಾನೆ. ಈ ಮಹತ್ವಾಕಾಂಕ್ಷೆಯ ಹಂಬಲ ಅನೇಕ ರೂಪಗಳನ್ನು ತೊಟ್ಟು ಜನರ ಮನಸ್ಸಿನಲ್ಲಿ ಬೇರೆ ಬೇರೆ ಆಕಾರಗಳನ್ನು ಪಡೆಯುತ್ತಿದೆ. ಇಂಗ್ಲಿಷ್ ಹಂಬಲ, (ಹಿಂದೆ ಸಂಸ್ಕೃತದ ಹಂಬಲ) ಕಂಪ್ಯೂಟರ್ ಹಂಬಲ, ವಿದೇಶಗಳಲ್ಲಿ ನೆಲೆಸುವ ಹಂಬಲ ಅಥವಾ ಅಪಾರ ಹಣಗಳಿಕೆಯ ಕೇಂದ್ರವೂ ಆಗಬಲ್ಲ 'ಆಧ್ಯಾತ್ಮಿಕ' ಕೇಂದ್ರಗಳನ್ನು ಕಟ್ಟುವ ಹಂಬಲ- ಹೀಗೆ ಇವೇ ಮೊದಲಾದವು ಇದರ ಕೆಲವು ರೂಪಗಳು. ಈ ಹಂಬಲಗಳ ನಡುವೆ ಮನುಷ್ಯ ಸಂಬಂಧಗಳು ಗೌಣ; ಸರಳವಾಗಿ ಪಡೆಯಬಹುದಾದ ತೃಪ್ತಿ ಗೌಣ. ಮನುಷ್ಯಪ್ರೀತಿ - ಜೀವನ ಪ್ರೀತಿಗಳಂತೂ ಕೈಲಾಗದ, ಸೋತುಹೋದ ಮಂದಮತಿಗಳು ತಮ್ಮ ನಿರರ್ಥಕ ಜೀವನಕ್ಕೆ ಕಂಡುಕೊಳ್ಳುವ ತಾತ್ತ್ವಿಕ ನೆಲೆಗಳು ಎಂಬಂತಿವೆ. ಈ ಸ್ಪರ್ಧೆಯಲ್ಲಿ ಗೆದ್ದು ನಿಲ್ಲುವವರು ಕೆಲವೇ ಮಂದಿ ಎಂಬುದು ಎಲ್ಲರಿಗೂ ತಿಳಿದ ವಿಷಯ. ಆದರೂ ಲಾಟರಿ ಟಿಕೆಟ್ ಕೊಂಡು ಒಂದು ಛಾನ್ಸ್ ತೆಗೆದುಕೊಳ್ಳೋಣ ಎಂಬ ಮನೋಭಾವನೆಯಂತೆ ಪ್ರತಿಯೊಬ್ಬರೂ ಈ ದೊಡ್ಡ ಗುರಿಯ ಲಾಟರಿಯನ್ನು ಗೆಲ್ಲಲು ಹವಣಿಸುತ್ತಾರೆ. ಶಿಕ್ಷಣದ ಮೂಲಕ ಇವರು ಬಯಸುವುದು ಇದನ್ನೇ.